ಬಂದರು. ತಮ್ಮ ಮೂಳೆಯಲ್ಲಿ ಸ್ವಲ್ಪ ಶಾಖ ತುಂಬಿಸಿಕೊಳ್ಳಲು ಎಂದು ಹೇಳುತ್ತಾ ಬಂದವರೇ ಚೆರ್ರಿ ಮರದ ಮುಂದೆ ನಿಂತರು. ಕೆಲವು ನಿಮಿಷಗಳ ಕಾಲ ದಿಟ್ಟಿಸಿ ಕೂಗಿ ಕೊಂಡರು, 'ರಾಕೇಶ, ಬಾ ಬಂದು ನೋಡು, ಅದು ಬೀಳುವ ಮುಂಚೆ ಬೇಗ ಬಾ'.

ರಾಕೇಶ ಮತ್ತು ತಾತ ಇಬ್ಬರೂ ಮರದ ಕಡೆ ದಿಟ್ಟಿಸಿ ನೋಡಿದರು ಅದು ಒಂದು ಪವಾಡವನ್ನು ಮಾಡಿದ್ದಂತೆ ! ಕೊಂಬೆಯೊಂದರ ಕೊನೆಯಲ್ಲಿ ಮಾಸಲು ಕೆಂಪು ಹೂವೊಂದು ಕಂಡು ಬಂದಿತ್ತು.

ಮಾರನೆಯ ವರ್ಷ ಇನ್ನೂ ಅನೇಕ ಹೂಗಳು ಕಂಡು ಬಂದವು. ಇದ್ದಕ್ಕಿದ್ದಂತೆ ಮರ ರಾಕೇಶನಿಗಿಂತ ಎತ್ತರವಾಗಿತ್ತು. ಅವನ ವಯಸ್ಸಿಗಿಂತ ಅದು ಅರ್ಧಕ್ಕಿಂತ ಕಡಿಮೆಯಾಗಿದ್ದರೂ ಕೂಡಾ ಮತ್ತೆ ಅದು ಅಲ್ಲಿದ್ದ ಕೆಲವು ಓಕ್ ಮರಗಳಿಗಿಂತ ಹೆಚ್ಚು ವಯಸ್ಸಾಗಿದ್ದ ತಾತನಿಗಿಂತ ಎತ್ತರವಾಗಿತ್ತು.

ಆದರೆ ರಾಕೇಶನೂ ಬೆಳೆದಿದ್ದನು. ಇತರ ಬಾಲಕರಂತೆ ಅವನೂ ಓಡಿ ಕುಣಿದು ಮರಗಳನ್ನು ಹತ್ತ ಬಲ್ಲವನಾಗಿದ್ದನು. ಅವನು ಸಾಕಷ್ಟು ಪುಸ್ತಕಗಳನ್ನು ಓದುತ್ತಿದ್ದನು, ತಾತ ಹೇಳುತ್ತಿದ್ದ ಕತೆಗಳನ್ನು ಕೇಳುವುದರಲೇ ಅವನಿಗೆ ಆಸಕ್ತಿಯಿದ್ದರೂ ಕೂಡಾ !

ಚೆರ್ರಿ ಮರದ ಹೂಗಳಲ್ಲಿ ಮಕರಂದವನ್ನು ಹೀರಲು ದುಂಬಿಗಳು ಬರುತ್ತಿದ್ದವು. ಸಣ್ಣ ಪುಟ್ಟ ಹಕ್ಕಿಗಳು ಹೂಗಳಿಗೆ ಕುಕ್ಕಿ ಅವುಗಳನ್ನು ಬೀಳಿಸುತ್ತಿದ್ದವು. ಆದರೆ ಮರ ಮಾತ್ರ ವಸಂತ ಋತು ಪೂರ್ತಿ ಚಿಗುರುತ್ತಲೇ ಇತ್ತು. ಹಕ್ಕಿಗಳಿಗಿಂತ ಹೂಗಳೇ ಹೆಚ್ಚಾಗಿದ್ದವು.

ಆ ಬೇಸಿಗೆಯಲ್ಲಿ ಮರದ ಮೇಲೆ ಸಣ್ಣ ಸಣ್ಣ ಚೆರ್ರಿ ಹಣ್ಣುಗಳಿದ್ದವು. ರಾಕೇಶ ಒಂದನ್ನು ರುಚಿ ನೋಡಿ ಉಗಿದ. ಅದು ಬಹಳ ಕಹಿ ಎಂದ. ಮುಂದಿನ ವರ್ಷ ಅವು ಚೆನ್ನಾಗಿರತ್ತೆ ತಾತ ಹೇಳಿದರು. ಆದರೆ ಹಕ್ಕಿಗಳು ಅವನ್ನು ಇಷ್ಟಪಟ್ಟಿದ್ದವು. ಅದರಲ್ಲೂ ದೊಡ್ಡ ಹಕ್ಕಿಗಳಾದ ಬುಲ್ ಬುಲ್ ಹಾಗೂ ಕೆಂಬಣ್ಣದ ಮಿನಿವೆಟ್‌ಗಳು ಮರದ ಮೇಲೆಲ್ಲಾ ಕುಕ್ಕಿ ಹಣ್ಣುಗಳನ್ನು ತಿನ್ನುತ್ತಾ ಸಂಭ್ರಮಿಸುತ್ತಿದ್ದವು.

ಒಂದು ಬಿಸಿಲಿನ ಝಳವಿದ್ದ ಮಧ್ಯಾಹ್ನ ದುಂಬಿಗಳೂ ನಿದ್ರಾವಸ್ಥೆಯಲ್ಲಿದ್ದಂತೆ ಕಂಡು ಬಂದಾಗ ರಾಕೇಶ ಅವನ ತಾತನಿಗಾಗಿ ಹುಡುಕುತ್ತಿದ್ದ ಅವರನ್ನು ಮನೆಯಲ್ಲೆಲ್ಲೂ ಕಾಣದೆ. ಆಗ ಅವನು ಮಲಗುವ ಕೊಠಡಿಯಿಂದಾಚೆ ನೋಡಿದಾಗ ಕಂಡದ್ದು ತಾತ ಚೆರ್ರಿ ಮರದ ಕೆಳಗೆ ಬೆತ್ತದ ಕುರ್ಚಿಯಲ್ಲಿ ವಿಶ್ರಮಿಸುತ್ತಿದ್ದುದನ್ನು.

'ಇಲ್ಲಿ ಸ್ವಲ್ಪವಾದರೂ ನೆರಳಿದೆ ಎಲೆಗಳನ್ನು ನೋಡುವುದು ನನಗೆ ಇಷ್ಟ' ತಾತ ಹೇಳಿದರು.

ರಾಕೇಶ ಹೇಳಿದ 'ಎಲೆಗಳು ಎಷ್ಟು ಚೆನ್ನಾಗಿವೆ! ಗಾಳಿ ಬೀಸಿದರೆ ಅವು ಡ್ಯಾನ್ಸ್ ಮಾಡಲು ರೆಡಿಯಾಗಿರುತ್ತವೆ'.

ತಾತ ಒಳಗಡೆ ಬಂದ ಮೇಲೆ ರಾಕೇಶ ತೋಟದೊಳಕ್ಕೆ ಹೋಗಿ ಮರದ ಕೆಳಗೆ ಹುಲ್ಲಿನ ಮೇಲೆ ಮಲಗಿದ. ಎಲೆಗಳ ಮೂಲಕ ನೀಲಾಕಾಶದ ಕಡೆಗೆ ದೃಷ್ಟಿ ಹಾಯಿಸಿದ ಪಕ್ಕಕ್ಕೆ ತಿರುಗಿದಾಗ ಪರ್ವತಗಳ ಮೇಲೆ ಮೋಡಗಳು ಹಾದು ಹೋಗುತ್ತಿರುವುದನ್ನು ನೋಡಿದ. ಸಂಜೆಯ ನೆರಳು ತೋಟದ ಮೂಲಕ ಹರಿದಾಗ ಅವನು ಮರದ ಕಳಗೆ ಮಲಗಿದ್ದ ತಾತ ಹಿಂತಿರುಗಿ ಬಂದು ರಾಕೇಶನ ಪಕ್ಕ ಕುಳಿತುಕೊಂಡರು, ನಕ್ಷತ್ರಗಳು ಹೊರ ಬರುವವರೆಗೆ ಮೌನವಾಗಿ ಕಾದರು. ನೈಟ್ ಜಾರ್ ಹಕ್ಕಿ ಕೂಗುವವರೆಗೆ ಕೆಳಗೆ ಕಾಡಿನಲ್ಲಿ ಸಿಕಾಡ ಕೀಟಗಳು ಹಾಡತೊಡಗಿದವು. ತಕ್ಷಣವೇ ಮರಗಳು ಕೀಟಗಳ ಶಬ್ದದಿಂದ ತುಂಬಿ ಹೋಯಿತು.

'ರಾಕೇಶ ಹೇಳಿದ ಕಾಡಿನಲ್ಲಿ ಎಷ್ಟೊಂದು ಮರಗಳಿವೆ, ಈ ಮರದ ವಿಶೇಷತೆಯೇನು? ನಾವೇಕೆ ಅದನ್ನು ಇಷ್ಟೊಂದು ಇಷ್ಟ ಪಡ್ತೀವಿ?'

ತಾತ ಹೇಳಿದರು 'ನಾವೇ ಅದನ್ನು ನೆಟ್ಟಿದ್ದು,ಅದಕ್ಕೇ ಅದು ವಿಶೇಷವಾಗಿರೋದು.'

'ಒಂದು ಸಣ್ಣ ಬೀಜ, ಇಷ್ಟು ದೊಡ್ಡ ಮರವಾಗಿ ಬೆಳೆಯಿತೇ?' ರಾಕೇಶ ಕೇಳಿದ. ಮರದ ನಯವಾದ ಭಾಗವನ್ನು ಮುಟ್ಟಿದ. ಮರದ ಕಾಂಡದ ಮೇಲೆಲ್ಲಾ ಕೈಯಾಡಿಸಿ ಎಲೆಯ ತುದಿಯವರೆಗೆ ಬೆರಳಾಡಿಸಿದ. ಮತ್ತೆ ಪಿಸುಗುಟ್ಟಿದ, 'ದೇವರಂತೆ ಭಾವಿಸುವುದು ಎಂದರೆ ಇದೇನಾ ತಾತ?'

■

# ತಂದೆ ಇನ್ನಿಲ್ಲ

■ ಚಿದಂಬರ ಬೈಕಂಪಾಡಿ

'ತಂದೆ ಇನ್ನಿಲ್ಲ. ನಿನ್ನನ್ನು ನೋಡ್ಬೇಕು ಅಂತಿದ್ರು, ಹೊರಟಿದ್ದಾನೆ, ಬರ್ತಾ ಇದ್ದಾನೆ ಅಂದೆ. ಎಲ್ಲಿಗೆ ಬಂದಿದ್ದಾನಂತೆ, ಇನ್ನೂ ಎಷ್ಟು ಹೊತ್ತಿಗೆ ಬರ್ತಾನೆ ಅಂತ ಕೇಳ್ತಿದ್ರು. ಸ್ವಲ್ಪ ಹೊತ್ತಲ್ಲಿ ಮೌನವಾದರು, ಬೇಗ ಹೊರಡು.' ಹೀಗೆಂದು ತಂಗಿ ಹೇಳಿದಾಗ ರಾತ್ರಿ ಹನ್ನೊಂದು ಗಂಟೆ. ಜನ ತಣ್ಣಗೆ ನಿದ್ದೆ ಮಾಡುತ್ತಿದ್ದ ಹೊತ್ತಲ್ಲಿ ತಂದೆ ತಮ್ಮ ಪಯಣ ಮುಗಿಸಿ ಮತ್ತೆಂದೂ ಬಾರದ ಲೋಕಕ್ಕೆ ಹೊರಟು ಹೋಗಿದ್ದರು.

ತಂದೆಯ ಸಾವು ಅನಿರೀಕ್ಷಿತವೇನಾಗಿರಲಿಲ್ಲ. ಆಸ್ಪತ್ರೆಗೆ ಸೇರಿಸಿರುವುದು ಗೊತ್ತಿತ್ತು. ಹಾಗೆಂದು ಅವರು ಅನಾರೋಗ್ಯದಿಂದ ಹಾಸಿಗೆ ಹಿಡಿದು ನರಳಿದವರಲ್ಲ. ತುಸು ಮೈಗೆ ಹಿತವಿಲ್ಲದಿದ್ದರೂ ಆಸ್ಪತ್ರೆಗೆ ಹೋಗಿ ಬರುವ ಅಭ್ಯಾಸ. ವೈದ್ಯರು ನಾಡಿ ಮುಟ್ಟಿ ಹೇಳುತ್ತಿದ್ದ ಮಾತಿಗೆ ಮತ್ತೆ ಲವಲವಿಕೆಗೆ ಮರಳುತ್ತಿದ್ದರು. ಹಾಗೆಯೇ ಅಂದುಕೊಂಡಿದ್ದೆ. ಆದರೆ ನನ್ನ ಊಹೆ ಈ ಸಲ ಸುಳ್ಳಾಯಿತು.

ತಂದೆಯ ಸಾವಿನಿಂದ ಎಲ್ಲರಂತೆಯೇ ವಿಚಲಿತನಾದೆ. ಬೇರೆಯವರು ತಂದೆ ತೀರಿಕೊಂಡರು ಅಂದಾಗ ಅವರ ವಯಸ್ಸು ಕೇಳುತ್ತಿದ್ದೆ. ಇಳಿವಯಸ್ಸಿನವರಾಗಿದ್ದರೆ ಬೇಸರವಾಗುತ್ತಿರಲ್ಲಿಲ್ಲ. ಆದರೂ ತಂದೆ ಮತ್ತೆ ಎಂದೆಂದಿಗೂ ನೋಡಲು ಸಿಗುವುದಿಲ್ಲವಲ್ಲ ಎನ್ನುವ ನೋವು ಕಾಡತೊಡಗಿತು. ರಾತ್ರಿಯೆಲ್ಲ ನಿದ್ದೆ ಹತ್ತಲಿಲ್ಲ. ಮಗ್ಗುಲು ಬದಲಿಸಿದರೂ ತಂದೆಯ ಕೃಶ ಶರೀರ ಕಣ್ಣಿಗೆ ಕಟ್ಟುತ್ತಿತ್ತು. ಅವರ ಮೊಂಡುತನ, ಛಲ, ಹಠಮಾರಿತನ, ಸಿಟ್ಟು ಸಿನಿಮಾದ ರೀಲುಗಳಂತೆ ಸುರುಳಿ ಬಿಚ್ಚಿಕೊಂಡು ಓಡುತ್ತಿದ್ದವು. ದೂರದ ಊರಿಗೆ ಕೆಲಸಕ್ಕೆ ಹೋಗುತ್ತೇನೆ ಎಂದಿದ್ದಾಗ ಬೇಡ ಅಂದಿರಲಿಲ್ಲ. ತಾನು ಕೊನೆಯುಸಿರೆಳೆದರೆ ಮುಖ ನೋಡಲು ಬರಲು ಸಾಧ್ಯವೇ ಎನ್ನುವ ಪ್ರಶ್ನೆಯೂ ಅವರನ್ನು ಕಾಡಿರಲಿಲ್ಲ. ಆದರೆ ಜನ್ಮ ಕೊಟ್ಟ ತಂದೆಯ ಮುಖವನ್ನು ಕೊನೆಯ ಬಾರಿ ನೋಡಲೇ ಬೇಕೆಂದು ಬೆಳ್ಳಂಬೆಳಗ್ಗೆ ಹೊರಟು ನಿಂತೆ. ಬಸ್ಸಿನಲ್ಲಿ ಹೊರಟರೆ ಸಂಜೆಯ ಹೊತ್ತಿಗೆ ಮನೆ ತಲುಪುತ್ತೇನೆ. ಅಲ್ಲಿಯ ತನಕ ಹೆಣ ಇಟ್ಟುಕೊಂಡು ಕಾಯುವಂತೆ ಮಾಡುವುದು ಸರಿಯಲ್ಲವೆಂದು ಕಾರು ಮಾಡಿಕೊಂಡು ಹೊರಟೆ. ನನ್ನ ಮೌನ ಮುಖವನ್ನು ಕಾರಿನ ಚಾಲಕ ಗಮನಿಸದಿದ್ದರೂ ವೇಗವಾಗಿ ಓಡಿಸುತ್ತಿದ್ದ. ಅದರಿಂದ ನನಗೂ ಲಾಭವೇ ಅಂದುಕೊಂಡು ಸುಮ್ಮನಾದೆ.

ತಂದೆಯ ಬಗ್ಗೆ ನನಗೆ ಅಪಾರವಾದ ಪ್ರೀತಿ ಇರದಿದ್ದರೂ ಅವರ ಹಠಮಾರಿತನವನ್ನು ಪ್ರೀತಿಸಿದ್ದೆ. ತನ್ನ ತಂದೆಯೊಂದಿಗೆ ಚಿಕ್ಕಂದಿನಲ್ಲಿ ಜಗಳ ಮಾಡಿಕೊಂಡು ಪಾಲಿನ ಆಸ್ತಿಗೂ ಕೈಚಾಚದೆ ಮನೆಯಿಂದ ಹೊರಬಿದ್ದಿದ್ದುದನ್ನು ಆಗಾಗ ಹೇಳುತ್ತಿದ್ದರು. ಯಾರ ಮಾತನ್ನೂ ಕೇಳುವ ಮನಸ್ಥಿತಿ ಅವರದಾಗಿರಲಿಲ್ಲ. ತಾನು ಹೇಳಿದ್ದೇ ಆಗಬೇಕು ಎನ್ನುವ ಹಠವನ್ನು ಚೆನ್ನಾಗಿ ತಿಳಿದಿದ್ದೆ. ಅವರ ಹಠಮಾರಿತನದಿಂದಾಗಿ ಕಷ್ಟಗಳನ್ನು ಎದುರಿಸಿದರು. ಅವರ ಕಷ್ಟಗಳಿಗೆ ಹೆಗಲು ಕೊಟ್ಟವಳು ಅಮ್ಮ. ಗಂಡನ ಹಠಮಾರಿತನದಿಂದಾಗಿಯೇ ಕಷ್ಟಗಳಿಗೆ ಗುರಿಯಾಗುತ್ತಿದ್ದೇನೆ ಎನ್ನುವ ಅರಿವಿದ್ದರೂ ಏನೂ ಮಾಡಲಾಗದ ಸ್ಥಿತಿ ಆಕೆಯದು. ಸಿಡುಕಿನ ಪತಿಯೊಂದಿಗೆ ಆರು ದಶಕಗಳ ಕಾಲ ಸಂಸಾರ ಮಾಡಿರುವ ಅಮ್ಮ ಅದೆಷ್ಟು ಗೋಳಾಡುತ್ತಿದ್ದಾಳೋ ಎನ್ನುವ ಚಿಂತೆ ಕಾಡಿತು. ಎಲ್ಲ ಹೆಂಡತಿಯರು ಗಂಡ ಇಹಲೋಕ ತ್ಯಜಿಸಿದಾಗ ಪಡುವ ಸಂಕಟವನ್ನು ಆಕೆಯೂ ಪಡುತ್ತಿದ್ದಾಳೆ ಬಿಡು ಅಂದಿತು ಮನಸು.

ತಮ್ಮ ಮಕ್ಕಳಿಗೆಂದು ಆಸ್ತಿ ಮಾಡಿಟ್ಟು ಕೊನೆಯುಸಿರೆಳೆಯುವ ತಂದೆಯಂತವರಲ್ಲ ನನ್ನ ತಂದೆ. ಓದಿಸಿ ಬೆಳೆಸಿದ್ದೇ ನನ್ನ ಕೊಡುಗೆ. ನನ್ನಿಂದ ಏನನ್ನೂ ಕೇಳಬೇಡಿ ಎನ್ನುತ್ತಿದ್ದರು. ಹಾಗೆಯೇ ಮಾಡಿದರೂ ಕೂಡಾ. ತಂಗಿಗೆ ವರನನ್ನು ಹುಡುಕಿದ ಮೇಲೆ `ನನ್ನ ಕೆಲಸ ಮುಗಿಯಿತು, ಇನ್ನೇನಿದ್ದರೂ ನೀನು, ನಿನ್ನ ಅಣ್ಣನ ಜವಾಬ್ದಾರಿ' ಅಂದಿದ್ದರು. ಈ ಮಾತು ಕೇಳಿ ಸಿಟ್ಟು ನೆತ್ತಿಗೇರಿ ಕೆರಳಿದ್ದೆ. ಹಣ ಹೊಂದಿಸಿಕೊಂಡಿಲ್ಲವೆಂದಾದರೆ ಮದುವೆ ಮಾಡಲು ಹೊರಟದ್ದೇಕೆ? ಅಂತಲೂ ಕೇಳಿದ್ದೆ. ಆಗಲೂ ಅವರು ಹೇಳಿದ ಮಾತು `ನೀವು